ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

9

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE : 2/7/2020

**ಸೋಂಕಿತರ ಮೇಲಿನ ಪ್ರಯೋಗಕ್ಕೆ ಉತ್ತಮ ಫಲಿತಾಂಶ**

# ಕೋವಿಡ್: 14 ಗಿಡಮೂಲಿಕೆಗಳ ಔಷಧ

2-7-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹೊಡೆದೋಡಿಸಲು ಜಗತ್ತಿನಾದ್ಯಂತ ಸಂಶೋಧನೆಗಳು ನಡೆಯುತ್ತಿವೆ. ಆಯುರ್ವೇದ ತಜ್ಞರೂ ಪ್ರಯತ್ನ ನಡೆಸಿದ್ದಾರೆ. ನಗರದ ಆಯುರ್ವೇದ ವೈದ್ಯ ಡಾ. ಗಿರಿಧರ ಕಜೆ 14 ಗಿಡ ಮೂಲಿಕೆಗಳಿಂದ ತಯಾರಿಸಿದ ಔಷಧವನ್ನು ಪ್ರಾಯೋಗಿಕವಾಗಿ ಬಳಸಿದ್ದು, 'ಉತ್ತಮ ಫಲಿತಾಂಶ ನೀಡಿದೆ' ಎಂದು ಅವರು ಹೇಳಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ (ಐಸಿಎಂಆರ್) ಅಂಗ ಸಂಸ್ಥೆಯಾದ ಕ್ಲಿನಿಕಲ್ ಟ್ರಯಲ್ಸ್ ರಿಜಿಸ್ಟ್ರಿ ಆಫ್ ಇಂಡಿಯಾದಲ್ಲಿ (ಸಿಟಿಆರ್‌ಐ) ಕಜೆ ಅವರು ತಮ್ಮ ಸಂಶೋಧನೆ ನೋಂದಾಯಿಸಿ, ಪೂರಕ ಮಾಹಿತಿ ಒದಗಿಸಿದ್ದರು. ಈ ಔಷಧವನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ರೋಗಿಗಳ ಮೇಲೆ ಪ್ರಯೋಗ ಮಾಡಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಮೇ16ರಂದು ಅನುಮತಿ ನೀಡಿತ್ತು. ಅದರಂತೆ ಅಲ್ಲಿನ 10 ರೋಗಿಗಳ ಮೇಲೆ ಜೂನ್ 7ರಿಂದ ಜೂನ್ 25ರವರೆಗೆ ನಡೆಸಿದ ವೈದ್ಯಕೀಯ ಪ್ರಯೋಗ ಯಶಸ್ವಿಯಾಗಿದೆ. ಇದರಿಂದಾಗಿ ಈ ಸಂಶೋಧನೆ ಬಗ್ಗೆ ರಾಜ್ಯ ಸರ್ಕಾರ ಕೂಡ ಆಸಕ್ತಿ ತೋರಿದೆ.

ವೈದ್ಯಕೀಯ ಪ್ರಯೋಗಕ್ಕೆ ಒಳಗಾಗಿದ್ದ 23ರಿಂದ 65 ವರ್ಷದೊಳಗಿನ ರೋಗಿಗಳಲ್ಲಿ ಸೋಂಕಿನ ಲಕ್ಷಣಗಳು ಬಹಿರಂಗವಾಗಿ ಗೋಚರಿಸುತ್ತಿದ್ದವು. ಇದರಿಂದಾಗಿ ಅವರು ಅಸ್ವಸ್ಥರಾಗಿದ್ದರು. ಅವರಿಗೆ ಅಲೋಪತಿ ಚಿಕಿತ್ಸೆಯ ಜತೆ ಜತೆಗೆಯೇ ಗಿಡಮೂಲಿಕೆಗಳಿಂದ ಕಜೆ ಅವರು ಸಂಶೋಧಿಸಿದ್ದ 'ಭೌಮ್ಯ' ಮತ್ತು 'ಸಾತ್ಮ್ಯ' ಮಾತ್ರೆಗಳನ್ನು ಪ್ರತಿನಿತ್ಯ ನೀಡಲಾಗುತ್ತಿತ್ತು. 'ಇದರಿಂದಾಗಿ ಕೇವಲ ಒಂಬತ್ತು ದಿನಗಳಲ್ಲಿಯೇ ರೋಗಿಗಳು ಸಂಪೂರ್ಣ ಚೇತರಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಇವರಲ್ಲಿ ಕೆಲವರು ಮಧುಮೇಹ, ಅಧಿಕ ರಕ್ತದೊತ್ತಡ, ಕ್ಷಯ ಸೇರಿದಂತೆ ವಿವಿಧ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರು ಕೂಡ ವೇಗವಾಗಿ ಗುಣಮುಖರಾಗಿದ್ದಾರೆ' ಎಂದು ಕಜೆ 'ಪ್ರಜಾವಾಣಿ'ಗೆ ತಿಳಿಸಿದರು.

> **ಕೊರೊನಾ ಸೋಂಕಿತರಿಗೆ ಆಯುರ್ವೇದ ಔಷಧ ಒದಗಿಸುವ ಸಂಬಂಧ ಡಾ. ಗಿರಿಧರ ಕಜೆ ಅವರು ಸರ್ಕಾರಕ್ಕೆ ಅಗತ್ಯ ಮಾಹಿತಿ ನೀಡಿದ್ದಾರೆ**
> **ಬಿ. ಶ್ರೀರಾಮುಲು,** ಆರೋಗ್ಯ ಸಚಿವ

> **ನಮ್ಮ ರೋಗಿಗಳಿಗೆ ಹಲವು ವರ್ಷಗಳಿಂದ ಈ ಮಾತ್ರೆ ನೀಡಲಾಗುತ್ತಿದೆ. ಕೊರೊನಾ ವಿರುದ್ಧವೂ ಉತ್ತಮವಾಗಿ ಕಾರ್ಯನಿರ್ವಹಿಸಲಿದೆ**
> **ಡಾ.ಗಿರಿಧರ ಕಜೆ,** ಆಯುರ್ವೇದ ವೈದ್ಯ

Bengaluru